ಜನ ಓಡಾಡುತ್ತಿದ್ದಾರೆ ಎಂಬುದರ ಬಗ್ಗೆ ನನ್ನ ವಿವಾದ ಇಲ್ಲ. ಎಲ್ಲಾ ತಾಲ್ಲೂಕು ಕೇಂದ್ರಗಳಿಗೂ ಹೆಚ್ಚು ಜನ ಹೋಗಿಬರತಕ್ಕದ್ದು ಇದೆ. ನಗರಸಭೆ ವ್ಯಾಪ್ತಿಯಿಂದ ದೇವನಹಳ್ಳಿ ೨೫.೨ ಕಿಲೋಮೀಟರ್ ಇದ್ದು ಅದೊಂದಕ್ಕೇ ಸಿಟಿ ಬಸ್ ಓಡಿಸುವುದಕ್ಕೆ ಆಗುವುದಿಲ್ಲ. ಬೇರೆ ವಿಚಾರಗಳನ್ನೂ ಗಮನದಲ್ಲಿಟ್ಟು ಕೊಂಡು ಇದನ್ನು ಪರಿಶೀಲಿಸಬೇಕಾಗುತ್ತದೆ. ಬಸ್ ಓಡಿಸತಕ್ಕಂಥಾದ್ದನ್ನು ಒಂದು ಪಾಲಿಸಿಯಾಗಿ ನಾವು ತೀರ್ಮಾನ ಮಾಡಬೇಕಾಗಿರುವುದರಿಂದ ಇದರ ಬಗ್ಗೆ ಆಲೋಚನೆ ಮಾಡುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇವೆ.

ಅಧ್ಯಕ್ಷರು.—ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ ನೋಡಿರಿ.

ಶ್ರೀ ಪಿ ಸಿ. ವಂಸಿನ್ವಮಯ್ಯ.—ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ಬೇಕಾದಷ್ಟು ತಡೆರಹಿತ ಬಸ್‌ಗಳನ್ನು ಹಾಕಿದ್ದಾರೆ. ಅವು ದೇವನಹಳ್ಳಿಯಲ್ಲಿ ನಿಲ್ಲುವುದಿಲ್ಲ. ದೇವನಹಳ್ಳಿಯಿಂದ ಸಾಕಷ್ಟು ಪ್ರಯಾಣಿಕರು ಇರುತ್ತಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೆಲಸ ಮಾಡಿ, ಶಾಸಕರ ಮೇಲಿರುವ ಸಾರ್ವಜನಿಕರ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಆಶ್ವಾಸನೆ ಕೊಡಬೇಕು. ಇದರಿಂದ ಸರಕಾರಕ್ಕೆ ಏನೂ ತೊಂದರೆಯಾಗುವುದಿಲ್ಲ. ಇಲಾಖೆಗೆ ಸಾಕಷ್ಟು ಲಾಭ ಬರುತ್ತದೆ. ಅನೇಕ ಸಾರಿ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿರುತ್ತೇನೆ. ಈ ಬಸ್‌ನ್ನು ಓಡಿಸಲೇಬೇಕು.

ಶ್ರೀ ಸಿದ್ಧರಾಮಯ್ಯ.—ಅವರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಉಡುಪಿಯಲ್ಲಿರುವ ಸ್ತ್ರೀ ಸೇವಾ ನಿಕೇತನ ಹಾಗೂ ಬಾಲಕಿಯರ ಪ್ರಮಾಣಿತ ಶಾಲೆ ಸಂಸ್ಥೆಗಳ ಬಗ್ಗೆ.

೫೦೫೧. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಹಾಗೂ ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಉಡುಪಿಯಲ್ಲಿರುವ ಸ್ತ್ರೀ ಸೇವಾ ನಿಕ್ಷೇತನ ಹಾಗೂ ಬಾಲಕಿಯರ ಪ್ರಮಾಣಿತ ಶಾಲೆ ಸಂಸ್ಥೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ನಿಜವೇ?

(ಆ) ಉಡುಪಿಯಲ್ಲಿರುವ ಸ್ತ್ರೀ ಸೇವಾ ನಿಕೇತನದ ಕಟ್ಟಡವು ತಯಾರಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಇದುವರೆವಿಗೂ ಕಟ್ಟಡವನ್ನು ಸ್ವಾಧೀನತೆಗೆ ತೆಗೆದುಕೊಳ್ಳದಿರಲು ಕಾರಣಗಳು ಯಾತ್ತು ಎಂದು ಸ್ವಾಧೀನತೆ ತೆಗೆದುಕೊಳ್ಳಲಾಗುವುದು?

ಶ್ರೀ ಪಿ.ಜಿ.ಆರ್. ಸಿಧ್ಯಾ (ಸಮಾಜ ಕಲ್ಯಾಣ ಸಚಿವರು).—

(ಅ) ನಿಜ

(ಆ) ಕಾಮಗಾರಿಯು ಇನ್ನೂ ಪೂರ್ಣಗೊಂಡಿಲ್ಲ.

(ಇ) 'ಆ' ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್. ಸನ್ಮಾನ್ಯ ಸಭಾಧ್ಯಕ್ಷರೇ, ಈ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಸಚಿವರು ಉತ್ತರ ಕೊಟ್ಟಿದ್ದಾರೆ. ಅದು ಯಾವ ಹಂತದಲ್ಲಿದೆ ಎಂದು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಪಿ.ಜಿ.ಆರ್. ಸಿಧ್ಯಾ.—ಬಿಲ್ಡಿಂಗ್ ಸಂಪೂರ್ಣವಾಗಿ ಮುಗಿದಿದೆ. ಕಾಂಪೌಂಡ್ ಹಾಕಬೇಕೆಂದು ಅಧಿಕಾರಿಗಳು ವರದಿಯನ್ನು ಕಳುಹಿಸಿದ್ದಾರೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನನಗೆ ತಿಳಿದಮಟ್ಟಿಗೆ ಅಲ್ಲಿ ಕಂಪೌಂಡ್ ಅಷ್ಟು ಆಗತ್ಯ ಇಲ್ಲ ಕುಡಿಯುವ ನೀರಿನ ಸರಬರಾಜು ಇಲ್ಲದೆ ಇರುವುದರಿಂದ, ಬಹಳ ತೊಂದರೆಯಾಗಿದೆ. ಳೆದ ಅಧಿವೇಶನದಲ್ಲಿ ಮಾನ್ಯ ಬಸಪಣ್ಣಪ್ಪನವರು ಒಂದು ತಿಂಗಳಲ್ಲಿ ಮಾಡಿ ಮುಗಿಸುತ್ತೇವೆ ಎಂಬ

ಆಶ್ವಾಸನೆ ಕೊಟ್ಟಿದ್ದರು. ಆದರೆ ಏನೂ ಮುಗಿಯಲಿಲ್ಲ, ಅವರೂ ಹೋದರು. ಹೀಗೆ ಆಗಬಾರದು. ತಮ್ಮ ಕಾಲವಲ್ಲದಿದ್ದರೂ, ತಾವು ಇರುವುದರೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ನಾನು ಫೈಲ್ ನೋಡಿದ್ದೇನೆ. ಮಾನ್ಯ ಬಸವಣ್ಣಪ್ಪನವರು ಆಶ್ವಾಸನೆ ಕೊಟ್ಟಿರುವುದು ನಿಜ. ಆದಾದ ಮೇಲೆ ಬಿಲ್ಡಿಂಗ್ ಕಂಪ್ಲೀಟ್ ಆಗಿರುವುದು ನಿಜ. ಕುಡಿಯುವ ನೀರಿನ ಬಗ್ಗೆ ನಾನು ಆದಷ್ಟು ಬೇಗ ವ್ಯವಸ್ಥೆ ಮಾಡಿಸಿ ಕೊಡುತ್ತೇನೆ.

ಅಂಗವಿಕಲ ಮಕ್ಕಳಿಗಾಗಿ ನೀಡುವ ಶಿಕ್ಷಣ ಸೌಲಭ್ಯಗಳ ಬಗ್ಗೆ

೫೨೬೮ ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಆಫಜಲಪುರ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಹಾಗೂ ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಅಂಗವಿಕಲ ಮಕ್ಕಳಿಗಾಗಿ ರಾಜ್ಯದಲ್ಲಿ ಒಟ್ಟು ಎಷ್ಟು ಶಾಲೆಗಳಿವೆ; ಅವುಗಳಲ್ಲಿ ವಸತಿ ನಿಲಯಗಳಿವೆಯೆ?

(ಆ) ಅಂಗವಿಕಲರಿಗೆ ಸರ್ಕಾರಿ ಕೆಲಸಗಳನ್ನು ನೀಡುವಾಗ ಶೇಕಡಾ ಎಷ್ಟು ಮಿಸಲಾತಿ ನೀಡಲು ನಿಗದಿ ಪಡಿಸಲಾಗಿದೆ;

(ಇ) ಈ ಮಿಸಲಾತಿ ಪ್ರಮಾಣ ಕಡಿಮೆಯಾಗಿಲ್ಲವೇ, ಇದನ್ನು ಶೇ. ೧೦ ರಷ್ಟಕ್ಕೆ ಏರಿಸಲು ಆಲೋಚಿಸಿದೆಯೇ?

(ಈ) ಈ ವರ್ಷ ಎಷ್ಟು ಅಂಗವಿಕಲರಿಗೆ ಉದ್ಯೋಗ ನೀಡಲಾಗಿದೆ ತಿಳಿಸುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

(ಅ) ೧) ಸರ್ಕಾರದ ವತಿಯಿಂದ — ೮ ಶಾಲೆಗಳು

೨) ಸ್ವಯಂ ಸೇವಾ ಸಂಸ್ಥೆಯಿಂದ — ೬೦ ಶಾಲೆಗಳು

೮ ಸರ್ಕಾರಿ ಶಾಲೆಗಳಿಗೆ ವಸತಿ ನಿಲಯಗಳಿವೆ

೬೦ ಸ್ವಯಂ ಸೇವಾ ಸಂಸ್ಥೆಯ ಶಾಲೆಗಳಿಗೆ ೩೫ ವಸತಿಗಳಿವೆ.

(ಆ) ಶೇಕಡಾ ೪

ಕೇಂದ್ರ ಸರ್ಕಾರದ ನೀತಿಯಲ್ಲಿ ಶೇಕಡಾ ೩

(ಇ) ಮಿಸಲಾತಿ ಪ್ರಮಾಣವನ್ನು ಶೇ. ೪ ರಿಂದ ಶೇ. ೫ಕ್ಕೆ ಏರಿಸಲು ಪರಿಶೀಲಿಸಲಾಗುತ್ತದೆ. ಇದನ್ನು ಶೇ. ೧೦ಕ್ಕೆ ಏರಿಸಲು ಪರಿಶೀಲನೆಯಲ್ಲಿಲ್ಲ.

(ಈ) ೨೯೩ ಅಂಗವಿಕಲರಿಗೆ ಅವಕಾಶ ಕಲ್ಪಿಸಿದೆ.

ವಕೇಷನಲ್ ಟ್ರೈನಿಂಗ್ ಸೆಂಟರ್. ಬೆಂಗಳೂರು ೧೫೨ ಜನ ಅಂಗವಿಕರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.

(ಪ್ರಾಸ್ತಾವನಾ ಸದಸ್ಯರಾದ ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್‌ರವರ ಪರವಾಗಿ ಶ್ರೀ ಕೆ.ಬಿ. ಶಾಣಪ್ಪನವರು ಪ್ರಶ್ನೆ ಕೇಳಿದರು)

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ವತಿಯಿಂದ ಸುಮಾರು ೮ ಶಾಲೆಗಳನ್ನು ನಡೆಸುತ್ತಿದ್ದಾರೆ. ಇನ್ನುಳಿದ ೬೦ ಶಾಲೆಗಳನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ. ಅದರಲ್ಲಿ ೩೫ ಶಾಲೆಗಳಿಗೆ ತಮ್ಮದೇ ಆದ ಕಟ್ಟಡ ಇದೆ. ಇನ್ನು ಸುಮಾರು ೨೫ ಶಾಲೆಗಳಿಗೆ ಕಟ್ಟಡ ಇಲ್ಲ. ಖಾಸಗಿಯವರಿಗೆ ತಾವು ಪರ್ಮಿಷನ್ ಕೊಡುವಾಗ ಏನಾದರೂ ನಿರ್ಧಾರ ಮಾಡಿರಬೇಕು. ಅವರಿಗೆ ತಮ್ಮದೇ ಆದ ಕಟ್ಟಡವಿರಬೇಕು, ಅಲ್ಲಿ ಎಲ್ಲಾ ಅಂಗವಿಕಲ ಮಕ್ಕಳು ಇರುವುದರಿಂದ ಅವರಿಗೆ